1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.12080/2006

ದಿಃ 06.01.2021 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 9

ಚಾಸಾಃ 13

| | |
|---|---|
| ಹೆಸರು | ಃ ರೆಹಾನ್ ಅಹ್ಮದ್ |
| ತಂದೆಯ ಹೆಸರು | ಃ ಅಬ್ದುಲ್ ಕರೀಮ್ |
| ವಯಸ್ಸು | ಃ 44 ವರ್ಷ |
| ಉದ್ಯೋಗ | ಃ ಜೂನಿಯರ್ ಅಸಿಸ್ಟೆಂಟ್, ಅಮಾನತ್ ಕೋ ಅಪರೇಟಿವ್ ಬ್ಯಾಂಕ್. |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಕಳೆದ 18 ವರ್ಷಗಳಿಂದ ಅಮಾನತ್ ಕೋ ಅಪರೇಟಿವ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿಗಳ ಪರಿಚಯ ನನಗೆ ಇರುತ್ತದೆ. 1ನೇ ಆರೋಪಿ ಮೊಹಮ್ಮದ್ ಅಸದುಲ್ಲಾ ಈತ ಅಮಾನತ್ ಕೋ ಅಪರೇಟಿವ್ ಬ್ಯಾಂಕ್‌ನ ಸೆಂಟ್ರಲ್ ಆಫೀಸ್‌ನಲ್ಲಿ ವ್ಯವಸ್ಥಾಪಕನಾಗಿದ್ದ. 2ನೇ ಆರೋಪಿ ಶಫೀವುಲ್ಲಾ ಈತ ಅಮಾನತ್ ಕೋ ಅಪರೇಟಿವ್ ಬ್ಯಾಂಕ್ ಎನ್.ಆರ್ ರೋಡ್ ಬ್ರ್ಯಾಂಚ್‌ನ ಸೀನಿಯರ್ ಮ್ಯಾನೇಜರ್ ಆಗಿದ್ದ. 3ನೇ ಆರೋಪಿ ಹಿದಾಯತ್ ವುಲ್ಲಾ ಅಮಾನತ್ ಕೋ ಅಪರೇಟಿವ್ ಬ್ಯಾಂಕ್ ಎನ್.ಆರ್ ರೋಡ್ ಬ್ರ್ಯಾಂಚ್‌ನ ಅಸಿಸ್ಟೆಂಟ್ ಅಕೌಂಟೆಂಟ್ ಆಗಿದ್ದ.

ನಾನು 2002ನೇ ಇಸವಿಯಲ್ಲಿ ಅಮಾನತ್ ಕೋ ಅಪರೇಟಿವ್ ಬ್ಯಾಂಕ್ ಶಿವಾಜಿನಗರ ಬ್ರ್ಯಾಂಚ್‌ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಕ್ಯಾಶಿಯರ್ ಆಗಿ ಬ್ಯಾಂಕ್‌ಗೆ ಜಮಾ ಮಾಡಿದ ಹಣವನ್ನು ಸ್ವೀಕರಿಸುವ ಮತ್ತು ಬ್ಯಾಂಕ್‌ನಿಂದ

ಮಾಡಬೇಕಾದ ಪಾವತಿಯನ್ನು ಮಾಡುವ ಕೆಲಸ ಮಾಡುತ್ತಿದ್ದೆ. ನಾನು ಚೆಕ್‌ಗಳು ಮೇಲಿನ ಅಧಿಕಾರಿಗಳಿಂದ ರುಜುವಾಗಿ ಬಂದ ನಂತರ ಟೋಕನ್ ಸ್ವೀಕರಿಸಿ ಹಣ ನೀಡುತ್ತಿದ್ದೆ. ನಾನು ಪ್ರತಿ ದಿನ ಜಮಾ ಮತ್ತು ಪಾವತಿ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿ ನಮೂದಿಸುತ್ತಿದ್ದೆ. ನಾನು ಪ್ರತಿ ದಿನ ಬ್ಯಾಂಕ್‌ನ ಅವಧಿ ಮುಗಿದ ನಂತರ ಜಮಾ ಮತ್ತು ಪಾವತಿಗಳನ್ನು ಪರಿಶೀಲಿಸಿ ಉಳಿದ ಹಣವನ್ನು ಅಕೌಂಟೆಂಟ್‌ಗೆ ನೀಡುತ್ತಿದ್ದೆ.

2002ರಲ್ಲಿ ಶ್ರೀಮತಿ ನೂರ್‌ಜಾನ್ ಬೇಗಂ ಶಿವಾಜಿನಗರ ಶಾಖೆಯ ಮ್ಯಾನೇಜರ್ ಆಗಿದ್ದರು. ದಿ: 30.03.2002 ರಂದು ಶಿವಾಜಿನಗರ ಬ್ರ್ಯಾಂಚ್‌ನಲ್ಲಿ ನಾನು ಕ್ಯಾಶಿಯರ್ ಅಗಿದ್ದೆ. ಆ ದಿನ ನಾನು 35.8 ಕೋಟಿ ರೂನ ಯಾವುದೇ ಹಣವನ್ನು ಸ್ವೀಕರಿಸಿ ಜಮಾ ತೆಗೆದುಕೊಂಡಿರುವುದಿಲ್ಲ. ದಿ: 30.03.2002 ರಂದು ನಾನು ಯಾವುದೇ ವ್ಯಕ್ತಿಗೆ 35.8 ಕೋಟಿ ರೂ ಪಾವತಿ ಸಹ ಮಾಡಿಲ್ಲ.

ಅದೇ ರೀತಿ ಏಪ್ರಿಲ್ ಅಥವಾ ಮೇ 2002ನೇ ಇಸವಿಯಲ್ಲೂ ಸಹ ರೂ 35.8 ಕೋಟಿ ಹಣವನ್ನು ಬ್ಯಾಂಕ್‌ಗೆ ಜಮಾ ಮಾಡಿಕೊಂಡಿಲ್ಲ ಮತ್ತು ಬ್ಯಾಂಕ್‌ನಿಂದ ಪಾವತಿ ಸಹ ಮಾಡಿಲ್ಲ. ನನ್ನನ್ನು ಹೊರತುಪಡಿಸಿ ಜಾಕೀರ್ ಹುಸೇನ್, ರಿಯಾಜ್ ಷರೀಫ್ ಮತ್ತು ಮಿರ್ಜಾ ಮೌಸೀನ್ ಅತ್ತರ್ ಇವರು ಸಹ ಕ್ಯಾಶಿಯರ್ ಆಗಿ ಶಿವಾಜಿನಗರ ಬ್ರ್ಯಾಂಚ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿ: 30.03.2002 ರ ಕ್ಯಾಶ್ ಬುಕ್‌ನಲ್ಲಿ ಕ್ರೆಡಿಟ್ ಎಂಟ್ರಿ ಸಂಖ್ಯೆ 337 ರಿಂದ 350 ಹಾಗೂ ಡೆಬಿಟ್ ಎಂಟ್ರಿ 421 ರಿಂದ 468 ನ್ನು ನಾನು ಮಾಡಿಲ್ಲ. ಯಾರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಂತರ ನನಗೆ ಈ ಕ್ರೆಡಿಟ್ ಮತ್ತು ಡೆಬಿಟ್ ಎಂಟ್ರಿಗಳನ್ನು ಎನ್.ಆರ್.ರೋಡ್ ಬ್ರ್ಯಾಂಚ್‌ನವರು ಮಾಡಿರುತ್ತಾರೆಂದು ಗೊತ್ತಾಯಿತು. ಆ ಸಮಯದಲ್ಲಿ 1 ರಿಂದ 3ನೇ ಆರೋಪಿಗಳು

ಎನ್.ಆರ್.ರೋಡ್ ಬ್ರ್ಯಾಂಚ್‌ನಲ್ಲಿ ಕೆಲಸ ಮಾಡುತ್ತಿದ್ದರು. ಈ ಬಗ್ಗೆ ನಾನು ಪೊಲೀಸ್‌ನವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆಎಪಿ ವಕೀಲರಿಂದಃ-

2001 ರಿಂದ 2002 ವರೆಗೆ ನಾನು ಶಿವಾಜಿನಗರ ಬ್ರ್ಯಾಂಚ್‌ನಲ್ಲಿ ಕೆಲಸ ಮಾಡುತ್ತಿದ್ದೆ. 2 ಮತ್ತು 3ನೇ ಆರೋಪಿಗಳು ನಾನು ಕೆಲಸ ಮಾಡುತ್ತಿದ್ದ ಶಿವಾಜಿನಗರ ಬ್ರ್ಯಾಂಚ್‌ಗೆ ಬಂದು ನಾನು ಇದ್ದ ಅವಧಿಯಲ್ಲಿ ಕೆಲಸ ಮಾಡಿಲ್ಲ. ಎನ್.ಆರ್.ರೋಡ್ ಬ್ರ್ಯಾಂಚ್‌ನ ಕೆಲಸ ಮತ್ತು ನಮ್ಮ ಬ್ರ್ಯಾಂಚ್‌ನ ಕೆಲಸಗಳ ಮಧ್ಯೆ ಯಾವುದೇ ಲಿಂಕ್ ಇಲ್ಲ. ಶಿವಾಜಿನಗರ ಬ್ರ್ಯಾಂಚ್‌ನ ಜಮಾ ಮತ್ತು ಪಾವತಿ ಬಗ್ಗೆ ಮಾತ್ರ ನಾನು ಪರಿಶೀಲನೆ ಮಾಡಿದ್ದೆ. ಜಮಾ ಮತ್ತು ಪಾವತಿ ಬಗ್ಗೆ ಡೇ ಬುಕ್ ಅಥವಾ ಕ್ಯಾಶ್ ಸ್ಕ್ರಾಲ್ ಇಟ್ಟುಕೊಂಡಿರುತ್ತೇವೆ ಮತ್ತು ಅದರಲ್ಲಿ ನಮೂದು ಮಾಡುತ್ತೇವೆ. ಬ್ರ್ಯಾಂಚ್ ಮ್ಯಾನೇಜರ್ ಇವರಿಗೆ ಕ್ಯಾಶ್ ರೋಲ್‌ನ್ನು ಚೆಕ್ ಮಾಡುವ ಜವಾಬ್ದಾರಿ ಇರುತ್ತದೆ. ನೂರ್ ಜಾನ್ ಬೇಗಂ ದಿಃ 30.03.2002 ರಂದು ಕ್ಯಾಶ್ ರೋಲ್ ಚೆಕ್ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ.

ಪ್ರತಿ ದಿನ ನಾವು ಅಟೆಂಡೆನ್ಸ್ ಹಾಕುತ್ತೇವೆ. ನಾನು ದಿಃ 30.03.2002 ರಂದು ಕರ್ತವ್ಯ ನಿರ್ವಹಿಸಿದ ಬಗ್ಗೆ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿರುತ್ತೇನೆ. ಜಾಕೀರ್ ಹುಸೇನ್, ರಿಯಾಜ್ ಷರೀಫ್ ಹಾಗೂ ಮಿರ್ಜಾ ಮೌಸಿನ್ ಅಕ್ಕರ್ ಇವರು ಸಹ ನಮ್ಮ ಶಾಖೆಯಲ್ಲಿ ಕ್ಯಾಶಿಯರ್ ಆಗಿ ಕ್ಯಾಶ್ ಬುಕ್ ಕ್ರೆಡಿಟ್ ಎಂಟ್ರಿ 330 ರಿಂದ 350 ಇದು ಯಾವ ಸೀರಿಸ್‌ನದು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಡೆಬಿಟ್ ಎಂಟ್ರಿ 421 ರಿಂದ 468 ಸಹ ಯಾವ ಸೀರಿಸ್‌ನದು ಎಂದು ನನಗೆ ಗೊತ್ತಿಲ್ಲ. ಯಾರೋ ಹೇಳಿದ್ದರಿಂದ ಸದರಿ ಎಂಟ್ರಿಗಳನ್ನು ಎನ್.ಆರ್.ರೋಡ್ ಬ್ರ್ಯಾಂಚ್‌ನವರು ಮಾಡಿದ್ದರು

ಎಂದು ಗೊತ್ತಾಗಿರುತ್ತದೆ. ಮೇಲಾಧಿಕಾರಿಗಳ ಮಾತು ಕೇಳಿ ನನ್ನ ಚೇರ್ಮನ್‌ನ್ನು ಉಳಿಸಬೇಕೆಂದು ಸುಳ್ಳು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯೂಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**)**

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ